ಸೀದಾ ಹೋದ ರಾಕೇಶ ಹೊಂಡವನ್ನು ಇಣುಕಿ ನೋಡಿದ. ಹೊಂಡದ ಮೊದಲ ಹಂತ ಮೊದಲೇ ಖಾಲಿಯಾಗಿತ್ತು. ಎರಡನೇ ಹಂತದ ನೀರು ಕೆಳಗಿಳಿದು ಕೆಳಗಿನ ಗುಂಡಿಗಿಂತ ಮೇಲೆ ಒಂದೆರಡು ಅಡಿ ಕಾಲು ಮುಳುಗುವಷ್ಟು ನಿಂತಿತ್ತು.

ನೋಡ್ದಾ ಮಗ... ನೀರೆಲ್ಲಾ ಮುಗ್ದಿತೆ, ಆ ಹೂಗುಡಿಗೆ ಬಂದಿರ ಸಸಿಗಳ ಹೆಂಗೆ ಉಳಿಸ್ಗಳದು.... ಬೆಳೆ ಕೈ ಹತ್ತ ಬೇಕಾದ್ರೆ ಇನ್ನೂ ಒಂದು ನಾಕ್ಕೈದು ಹದ ನೀರು ಕುಡುಸಬ್ಯಾಡ್ವ.. ಅವನ ಬೆನ್ನು ಹಿಂದೆ ನಿಂತಿದ್ದ ಹೊನ್ನಮ್ಮ ಹೇಳಿದ್ದಳು.

ರಾಕೇಶನಿಗೆ ಗಾಬರಿಯಾಗಿತ್ತು. ಆದರೂ ಸುಧಾರಿಸಿಕೊಂಡು 'ಇರ್ಲಿ ಬಿಡವ್ವ... ಕೆಳ್ಳ ಗುಂಡಿಲಿರ ನೀರ್ನ ಹೆಂಗಾದ್ರೂ ತೆಳ್ ತೆಳ್ಗೆ ಹೊಡ್ದು ಸುಧಾರಿಸಗಳ್ಳನ' ಎಂದ.

'ಅದ್ದೆಂಗೆ ಸುಧಾರಿಸ್ಗಳದ ಕಣಪ್ಪ... ಆ ಗುಂಡಿ ಒಳಗೆ ಬರೀ ನೀರೈತೆ ಅಂತಿಯಾ.. ಮ್ಯಾಲಿಂದ ನೀರಿನ ಜೊತೆ ಸವ್ಕಂದ್ ಬಂದಿರ ನುಣುಪು ಮಣ್ಣೇ ಅಣುಗಿನಂಗೆ ತುಂಬ್ಕೆಂಡಿತೆ... ಮ್ಯಾಲೆ ತೇಲ್ತಿರದು ಒಂದೆರಡಡಿ ನೀರ್ ಇರ್ಬಹುದು. ಅಷ್ಟೇ. ಈ ಬೆಳೆ ಆಸೆ ಬುಟ್ಟಂಗೆಯಾ ನಡಿರಿ.' ಎನ್ನುತ್ತಾ ಹಿಂತಿರುಗಿ ಬರಬರನೆ ಹೆಜ್ಜೆ ಹಾಕಿದ್ದಳು. ತಪ್ಪು ಮಾಡಿದ ಮಕ್ಕಳಂತೆ ಮುಖ ಮಾಡಿಕೊಂಡು ಹೆಡ್ಡಪ್ಪ ನಿಂತಿದ್ದ.

'ಅವ್ವ ಹೇಳಿದ್ದು ಸರಿ... ಎಲ್ಲಾ ಮುಗಿತು ನಡಿರಿ' ಎನ್ನುತ್ತಾ ರಾಕೇಶನೂ ಮನೆಯ ಕಡೆ ಹೆಜ್ಜೆ ಹಾಕಿದ್ದ.

* * *

ಮುಳುಗಿದ ಹಸುವನ್ನು ಹೆಡ್ಡಪ್ಪನೊಂದಿಗೆ ಹೊಂಡದಲ್ಲಿ ಬಿಟ್ಟು ಬಂದಿದ್ದ. ಹೊನ್ನಮ್ಮ ಗಡಿಬಿಡಿಯಲ್ಲಿ ಮನೆಯ ಕಡೆ ಹೋಗಿ ಅಟ್ಟವೆಲ್ಲಾ ತಡಕಾಡಿ ಹಗ್ಗ ತೆಗೆದುಕೊಂಡು ಬರುವಷ್ಟರಲ್ಲಿ ಮುಕ್ಕಾಲು ಗಂಟೆಯೇ ಕಳೆದು ಹೋಗಿತ್ತು. ಅಷ್ಟರಲ್ಲಿ ಅವಸರದಮ್ಮನ ಗುಡಿಗೆ ಹೋಗುವ ಟ್ರಾಕ್ಟರ್ ಹೊರಟು ಹೋಗಿತ್ತು. ಅದರಲ್ಲಿ ತುಂಬಿದ್ದ ಗಂಡು ಹೆಣ್ಣುಗಳ ಕೇಕೆಯ ಸಂಭ್ರಮ, ಹಂದಿಯ ಕಿರುಚಾಟ ಎಲ್ಲಾ ಹೊಂಡದೊಳಗೆ ಹಗ್ಗ ಹಿಡಿದು ಕೂತಿದ್ದ ಹೆಡ್ಡಪ್ಪನಿಗೆ ಕೇಳಿದಾಗ ಮನಸ್ಸು ಕಸಿವಿಸಿಗೊಂಡಿತ್ತು. ಅವನು ಅವರ ಗಮನ ಸೆಳೆಯಲು ಎಷ್ಟು ಜೋರಾಗಿ ಕೂಗಿಕೊಂಡರೂ ಅವನ ದನಿ ಹೊಂಡದೊಳಗೇ ಪ್ರತಿಧ್ವನಿಸಿ ನೀರವ ಮೌನ ಕವಿಯಿತು.

ನಂತರದಲ್ಲಿ ಕರಿಯಣ್ಣನ ಟಿವಿಎಸ್ ಸದ್ದು ಕೇಳಿ ಇನ್ನೂ ಜೋರಾಗಿ ಕಿರುಚಾಡಿದ. ಹೆಡ್ಡಪ್ಪನನ್ನು ತನ್ನೊಂದಿಗೆ ಕರೆದುಕೊಂಡು ಹೋಗಲೆಂದೇ ಬರುತ್ತಿದ್ದ ಅವನು ಸದ್ದು ಕೇಳಿ ಬಂದು ಹೊಂಡದಲ್ಲಿ ಇಣುಕಿದ. ಹೊಂಡದೊಳಗಿನ ಹೆಡ್ಡಪ್ಪನ ಅವಸ್ಥೆ ಕಂಡು ಕಸಿವಿಸಿಯಾಯಿತು.



'ಎಂತ ಎಡವಟ್ಟಿನ ಕೆಲಸ ಮಾಡ್ಕಬುಟ್ಟಿಯಾ ಮಾರಾಯ... ಊರವ್ರೆಲ್ಲಾ ಹೋಗಿ ಆಯ್ತು. ನಾನೊಬ್ಬ ಏನ್ಮಾಡ್ಲಿ ಹೇಳು. ಗಂಡ ಹೆಂಡ್ತಿ ಇಬ್ರೂ ಹೆಂಗಾದ್ರೂ ಮಾಡಿ ನಾವು ವಾಪಾಸ್ ಬರೋವರೆಗೆ ಹಸ ಮುಳಗ್ದಂಗೆ ಎಳೆದು ಹಿಡ್ಕಂಡಿರಿ' ಎಂದು ಹೇಳಿ ಹೊರಟು ಹೋಗಿದ್ದ.

'ಥೋ' ಹೊನ್ನಮ್ಮನ ಮಾತು ಕೇಳದಲೆ ಎಂತಾ ಹೆಡ್ಡ ಕೆಲಸ ಮಾಡ್ಕಂಡ್ ಬುಟ್ಟೆ... ಸರ್ಕಾರದವರ ಮಾತು ನಂಬಿ ಮನೆಯವರನ್ನೆಲ್ಲಾ ಹೊಂಡಕ್ಕೆ ಬೀಳೋ ಹಂಗೆ ಮಾಡಿಬಿಟ್ನಲ್ಲ... ಅಲ್ಲಲ್ಲಿ ಮಣ್ಣು ಜರುಗಿರುವ ಈ ಹೊಂಡ ಹೆಂಗೂ ಮುಂದಿನ ಮಳೆಗಾಲಕ್ಕೆ ತಡೆಯಲಾರದು. ಅದೂ ಈಗಲೇ ಕುಸಿದು ಎಲ್ಲರ ನೆಮ್ಮದಿಗೇಡಿಗೆ ಕಾರಣನಾದ ನಾನು ಏಕೆ ಇದರೊಳಗೆ ಮುಚ್ಚಿ ಹೋಗಬಾರದು... ರಾಕೇಶನನ್ನು ಹೇಗೆ